ಈರಪ್ಪ ಯಾಕೆ ತಪ್ಪಿಸಲಿಲ್ಲ? ಒಂದೋ ಇಬ್ಬರೂ ಸೇರಿ ಕೊಲೆ ಮಾಡಿರಬೇಕು. ಹಾಗಿದ್ದರೆ, ಸಾಬು ಯಾಕೆ ಈರಪ್ಪನಿಗೆ ಹಣ ನೀಡ್ತಿದ್ದ? ಎರಡೂ ಇಪ್ಪತ್ತಕ್ಕೆ ಚೆಟ್ಟಿಯಪ್ಪ ಇಲ್ಲಿಗೆ ಬಂದಿದ್ದಾನೆ. ಆವಾಗ, ಸಾಬು ಹೊರಗೆ ಬಂದಿರಲೇಬೇಕು. ಅದೃಷ್ಟವಶಾತ್ ನಮಗೊಂದು ಸಾಕ್ಷ್ಯ ಸಿಕ್ಕಿದೆ! ಪಕ್ಕದ ಅಪಾರ್ಟ್‌ಮೆಂಟಿನಲ್ಲಿದ್ದ ಸಿಸಿಟೀವಿಯಲ್ಲಿ ಎಲ್ಲವೂ ದಾಖಲಾಗಿದೆ. ಪುಣ್ಯವಶಾತ್ ಹಳೆಯ ಡಾಟಾವನ್ನು ಅವರು ಶೇಖರಿಸಿಟ್ಟುದುದರಿಂದ ನಮಗೆ ಸಹಾಯವಾಯಿತು. ಅದರಲ್ಲಿ ಸಾಬು ಹೊರಗೋಡಿ ಬಂದುದು, ಚೆಟ್ಟಿಯಪ್ಪ ಹಿಂಬಾಲಿಸಿದ್ದು, ತಡವಾಗಿ ಈರಪ್ಪ ಹೊರಗೆ ಬಂದಿದ್ದೆಲ್ಲಾ ಇದೆ. ಈರಪ್ಪ ಮನೆಯೊಳಗೇ ಇದ್ದಾಗ ಪ್ರಜ್ಞೆಯಿಲ್ಲದ ಮಿಥಿಲಾಳನ್ನು ಬೆಂಕಿಗೂಡಿಗೆ ತಳ್ಳಿದ್ದಾನೆ!"

ಈರಪ್ಪ ತಲೆ ತಗ್ಗಿಸಿದ.

"ಆತನಿಗೆ ಆಕೆಯ ಮೇಲೆ ಹಗೆಯಿತ್ತು. ಚೆಟ್ಟಿಯಪ್ಪ ಆತನಿಗೆ ಕಾಫಿ ತೋಟ ಕೊಡುವುದನ್ನು ಆಕೆ ವಿರೋಧಿಸಿದ್ದಳು."

ಆತ ಹೌದೆನ್ನುವಂತೆ ತಲೆ ಆಡಿಸಿದ.

ಸೊಸೈಟಿಯಲ್ಲಿ ತಾನೊಂದು ಹಗರಣದಲ್ಲಿ ಪಾಲುದಾರನಾಗಿದ್ದು, ಅದರ ಮಾಹಿತಿಯಿದ್ದ ಮಿಥಿಲಾ ತನ್ನನ್ನು ಬೆದರಿಸಿದ್ದಳು. ಆದ್ದರಿಂದ ಆಕೆಯ ಜೊತೆ ಅನೈತಿಕ ಸಂಬಂಧಕ್ಕೆ ತಾನು ಸಮ್ಮತಿಸಿದೆನೆಂದು ಸಾಬು ಹೇಳಿದ. ಮಿಥಿಲಾಳ ಲ್ಯಾಪ್‌ಟಾಪ್‌ನಲ್ಲಿ ತನ್ನ ಫೋಟೊಗಳಿರಬಹುದೆಂದು ಭಾವಿಸಿ, ಚೆಟ್ಟಿಯಪ್ಪನ ಮನೆಗೆ ಹೋಗಲು, ಈರಪ್ಪನಿಂದ ಕೀ ಪಡೆದಿದ್ದನಂತೆ.

"ನಾವೀಗ ಮಾಡಬೇಕಾಗಿರುವ ಕೆಲಸಗಳು ಎರಡು. ಒಂದು, ಈರಪ್ಪನನ್ನು ಡಿಸೋಜನಿಗೆ ಹಸ್ತಾಂತರಿಸುವುದು. ಆತ ಆ ಇಟ್ಟಿಗೆಯನ್ನು ಅಡಗಿಸಿಟ್ಟಿರುವ ಜಾಗವನ್ನು ತೋರಿದರೆ, ಅದೊಂದು ಬಲವಾದ ಸಾಕ್ಷ್ಯವಾಗುತ್ತದೆ."

ಡಿಸೋಜನು ಈರಪ್ಪನನ್ನು ಕರೆದೊಯ್ದ ಮೇಲೆ, ನಾವು ಚೆಟ್ಟಿಯಪ್ಪನನ್ನು ಭೇಟಿಯಾದೆವು. ಕೊಲೆ ಆಪಾದನೆಯನ್ನು ಒಪ್ಪಿಕೊಳ್ಳಲು ಸಾಬುವಿನ ಇಟ್ಟಿಗೆಯೇಟಿಗೆ ಮಿಥಿಲಾ ಅಕಸ್ಮಾತ್ತಾಗಿ ಬೆಂಕಿಗೂಡಿಗೆ ಬಿದ್ದಳೆನ್ನುವ ತಪ್ಪು ಕಲ್ಪನೆಯೇ ಕಾರಣವೆಂದು ಆತ ಹೇಳಿದ. ಜೊತೆಗೆ, ಸಾಬು ತನ್ನ ಆಪ್ತಮಿತ್ರನ ಮಗನಾಗಿರುವುದು, ತನ್ನನ್ನು ಕಾಡುತ್ತಿರುವ ಕ್ಯಾನ್ಸರ್, ಮಿಥಿಲಾಳ ಕುದುರೆ ಜೂಜಿನ ಹುಚ್ಚಿನಿಂದಾಗಿ ದುಂದುವೆಚ್ಚ ಮತ್ತು ಸಾಲ, ಆಕೆಯೊಂದಿಗೆ ನಿರಂತರ ಜಗಳ, ಸತ್ಯ ಹೇಳಿದರೆ ಮರ್ಯಾದೆ ಹೋಗುವ ಭಯ ಇತ್ಯಾದಿಗಳಿಂದ ಬೇಸತ್ತು ತಾನೇ ಕೊಲೆಗಾರನೆಂದು ಒಪ್ಪಿಕೊಂಡೆನೆಂದ.

ಚೆಟ್ಟಿಯಪ್ಪ ತನ್ನ ಖಾಸಾ ಮಿತ್ರನೆನ್ನುವುದನ್ನು ಹೇಳಿದರೆ, ತಾನು ಪೂರ್ವಗ್ರಹ ಪೀಡಿತನೆಂದು ಭಾವಿಸಿಯಾರೆಂದು ಕಾಶಿ ಹೇಳಿರಲಿಕ್ಕಿಲ್ಲವೆಂದು ನಾವು ತರ್ಕಿಸಿದೆವು. ಚೆಟ್ಟಿಯಪ್ಪ ಆರೋಪ ಮುಕ್ತನಾದರೂ, ಅದನ್ನು ಸಂಭ್ರಮಿಸಲು ಕಾಶಿಯವರು ಉಳಿಯಲಿಲ್ಲವೆನ್ನುವ ಕೊರಗು ನಮ್ಮನ್ನು ಬಹು ಕಾಲ ಕಾಡುತ್ತಿತ್ತು.

### ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ತೆದಾರಿ ಕಿರುಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ವಿವಿಧ ಪತ್ರಿಕೆಗಳಲ್ಲಿ ಕತೆ–ನೀಳ್ಗತೆಗಳೂ ಪ್ರಕಟಗೊಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.